RNU AIR DHARWAD

SEPTEMBER 26, 2025

# AKASHAVANI - DHARWAD

# PRADESH SAMACHARA (KANNADA) 07.05 A.M.

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಸ್ವಚ್ಛತೆಯೇ ಸೇವೆ ಪಾಕ್ಷಿಕ:** 'ಒಂದು ದಿನ, ಒಂದು ಗಂಟೆ, ಒಂದಾಗಿ' ಅಭಿಯಾನಕ್ಕೆ, ವ್ಯಾಪಕ ಜನ ಸ್ಪಂದನೆ.
- **ಭಾರತೀಯ ವಾರ್ತಾ ಶಾಖೆಯಿಂದ,** ವಿಜಯಪುರದಲ್ಲಿ ಇಂದು, ಕೇಂದ್ರ ಪುರಸ್ಕೃತ ಯೋಜನೆಗಳ, ವಾರ್ತಾಲಾಪ ಕಾರ್ಯಾಗಾರ.
- **ಕೊಪ್ಪಳದಲ್ಲಿ, ಇಂದಿನಿಂದ ಮೂರು ದಿನ, 'ಪೆನ್ಕಾಕ್ ಸಿಲಟ್',** 13ನೇ ರಾಷ್ಟ್ರೀಯ, ಸಮರ ಕಲೆ ಸ್ಪರ್ಧೆ.
- **ಕಲಬುರಗಿ ಜಿಲ್ಲೆ, ಕೋಲಕುಂದಾ ಗ್ರಾಮದ,** ಮಮತಾ ಮಡಿವಾಳ, ಭಾರತ ಮಹಿಳಾ ಕ್ರಿಕೆಟ್ 'ಎ' ತಂಡಕ್ಕೆ ಆಯ್ಕೆ.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ,** 75ನೇ ವರ್ಷದ ಜನ್ಮ ದಿನಾಚರಣೆ ಹಿನ್ನೆಲೆ, ಕಳೆದ 17ನೇ ತಾರೀಖಿನಿಂದ, ಅಕ್ಟೋಬರ್ 2 ಗಾಂಧಿ ಜಯಂತಿ ವರೆಗೆ, ಸ್ವಚ್ಛತಾ ಹೀ ಸೇವಾ ಪಾಕ್ಷಿಕ ಜರುಗುತ್ತಿದೆ.

<><><>

**ಆಕಾಶವಾಣಿ ಧಾರವಾಡ ಕೇಂದ್ರದ** ಆವರಣದಲ್ಲಿ, ಅಭಿಯಾಂತ್ರಿಕ ವಿಭಾಗದ, ಉಪ ಮಹಾನಿರ್ದೇಶಕ ಅರುಣ ಪ್ರಭಾಕರ ಹಾಗೂ ಕಾರ್ಯಕ್ರಮ ವಿಭಾಗದ ಮುಖ್ಯಸ್ಥ, ಶರಣಬಸವ ಚೋಳಿನ ನೇತೃತ್ವದಲ್ಲಿ, ನಿಲಯದ ಕಲಾವಿದರು, ಸಿಬ್ಬಂದಿ, ಸ್ವಚ್ಛತಾ ಅಭಿಯಾನದಲ್ಲಿ ಪಾಲ್ಗೊಂಡರು.

<><><>

**'ಏಕ್ ಪೇಡ್ ಮಾ ಕೇ ನಾಮ್',** ಆಂದೋಲನದಡಿ, ಸ್ವಚ್ಛತಾ ಅಭಿಯಾನದ ಸವಿ ನೆನಪಿಗಾಗಿ, ನಿಲಯದ ಆವರಣದಲ್ಲಿ ಸಸಿ ನೆಟ್ಟರು. ಕೀರ್ತಿಶೇಷ ಎಸ್.ಎಲ್. ಭೈರಪ್ಪ ಅವರಿಗೆ, ಶ್ರದ್ಧಾಂಜಲಿ ಸಲ್ಲಿಸಿದರು.

<><><>

**ರಾಜ್ಯ ಉಪ ಲೋಕಾಯುಕ್ತ,** ನ್ಯಾಯಮೂರ್ತಿ, ಕೆ.ಎನ್. ಫಣೀಂದ್ರ ಅವರು, ಕಾನೂನು ತಿಳಿವಳಿಕೆ ಮೂಲಕ, ಶುಚಿತ್ವ ಹಾಗೂ ಸ್ವಚ್ಛತೆಯ ಬಗ್ಗೆ, ಶ್ರೀಸಾಮಾನ್ಯರಲ್ಲಿ ಅರಿವು ಮೂಡಿಸುವಂತೆ, ಚಿಕ್ಕಮಗಳೂರು ಜಿಲ್ಲಾಡಳಿತಕ್ಕೆ ಸೂಚಿಸಿದ್ದಾರೆ. ಚಿಕ್ಕಮಗಳೂರು ನಗರದಲ್ಲಿ, ಸ್ವಚ್ಛತೆಯೇ ಸೇವೆ ಪಾಕ್ಷಿಕದಡಿ, ಸ್ವಚ್ಛತಾ ಕಾರ್ಯಕ್ಕೆ, ಸ್ವತಃ ಕೈಜೋಡಿಸಿ, ಚಾಲನೆ ನೀಡಿ, ಅವರು ಮಾತನಾಡಿದರು.

<><><>

**"ಒಂದು ದಿನ, ಒಂದು ಗಂಟೆ, ಒಂದಾಗಿ",** *Ek Din, Ek Ghanta, Ek Saat* ಅಭಿಯಾನದ ಅಂಗವಾಗಿ, ಧಾರವಾಡದ ಗಾಂಧಿ ನಗರದಲ್ಲಿ, ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ಸಿಬ್ಬಂದಿ, ಹಾಗೂ **ಬೆಳಗಾವಿ ಜಿಲ್ಲಾ ಪಂಚಾಯಿತಿ,** ಯೋಜನಾ ನಿರ್ದೇಶಕ ರವಿ ಬಂಗಾರೆಪ್ಪನ್ನವರ, ತಾಲೂಕಿನ ಬಸ್ತವಾಡ ಗ್ರಾಮದಲ್ಲಿ, ಸ್ವಚ್ಛತಾ ಕಾರ್ಯಕ್ಕೆ, ಚಾಲನೆ ನೀಡಿದರು.

<><><>

**ಆಯ್ದ ರಾಜ್ಯಗಳಲ್ಲಿ,** ಅಂತರ್ಜಲ ಸಂಪನ್ಮೂಲಗಳ ನಿರ್ವಹಣೆ ಸುಧಾರಿಸಿ, ನೀರಿನ ಒತ್ತಡ ನಿಭಾಯಿಸಲು, ಕೇಂದ್ರ ಸರ್ಕಾರ ಜಾರಿಗೆ ತಂದ, 'ಅಟಲ್ ಭೂ ಜಲ ಯೋಜನೆ' ಅನುಷ್ಠಾನದಲ್ಲಿ, ಕರ್ನಾಟಕ ರಾಜ್ಯ, ದೇಶಕ್ಕೆ ಪ್ರಥಮ ಸ್ಥಾನ ಗಳಿಸಿದೆ ಎಂದು, ಸಣ್ಣ ನೀರಾವರಿ ಖಾತೆ ಸಚಿವ ಎನ್.ಎಸ್.ಬೋಸರಾಜು ತಿಳಿಸಿದ್ದಾರೆ. ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ಸಹಯೋಗದಲ್ಲಿ, ಸಾವಿರದ 201 ಕೋಟಿ 52 ಲಕ್ಷ ರೂಪಾಯಿ ವೆಚ್ಚದಲ್ಲಿ, ಅತಿ ಹೆಚ್ಚು ಅಂತರ್ಜಲ ಬಳಸುವ, ರಾಜ್ಯದ 14 ಜಿಲ್ಲೆಗಳ, ಸಾವಿರದ ನೂರಾ 99 ಗ್ರಾಮ ಪಂಚಾಯ್ತಿಗಳಲ್ಲಿ, ಸಮುದಾಯದ ಸಹಭಾಗಿತ್ವದಲ್ಲಿ, ಅಟಲ್ ಭೂ ಜಲ ಯೋಜನೆ ಜಾರಿಗೊಳಿಸಲಾಗಿದೆ. ಜಲ ಸಂರಕ್ಷಣಾ ಯೋಜನೆಗಳ ಮೂಲಕ, 8 ದಶಾಂಶ 7–1 ಟಿ.ಎಂ.ಸಿ. ಅಡಿ ಪ್ರಮಾಣದ ನೀರನ್ನು, ಭೂಮಿಗೆ ಮರುಪೂರಣಗೊಳಿಸಲಾಗಿದೆ ಎಂದು ಸಚಿವ ಬೋಸರಾಜು, ಎಕ್ಸ್ ಮಾಧ್ಯಮದಲ್ಲಿ, ಪ್ರಕಟಿಸಿದ್ದಾರೆ.

<><><>

**ರಾಜ್ಯ ಉಚ್ಚ ನ್ಯಾಯಾಲಯದ,** ಮುಖ್ಯ ನ್ಯಾಯಮೂರ್ತಿ ವಿಭು ಬಾಖ್ರು ಹಾಗೂ ನ್ಯಾಯಮೂರ್ತಿ ಸಿ.ಎಂ.ಜೋಶಿ ಅವರಿದ್ದ ನ್ಯಾಯಪೀಠ, ಎರಡು ದಿನ, ವಾದ ಪ್ರತಿವಾದ ಆಲಿಸಿ, ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆಗೆ ತಡೆ ನೀಡಲು ನಿರಾಕರಿಸಿ, ಆದೇಶಿಸಿದೆ. ದತ್ತಾಂಶದ ಗೌಪ್ಯತೆ ಕಾಯುವ, ಪ್ರಮಾಣಪತ್ರ ಸಲ್ಲಿಸಲು, ಹಿಂದುಳಿದ ವರ್ಗಗಳ ಆಯೋಗಕ್ಕೆ ನ್ಯಾಯಾಲಯ ಸೂಚಿಸಿ, ವಿಚಾರಣೆಯನ್ನು ಡಿಸೆಂಬರ್ 2ನೇ ವಾರಕ್ಕೆ ಮುಂದೂಡಿತು.

<><><>

**ರಾಜ್ಯದಲ್ಲಿ ಕೈಗೊಂಡಿರುವ,** ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸಮೀಕ್ಷೆಯ ಕುರಿತು, ಕೆಲ ನಿರ್ದೇಶನ ನೀಡಲು, ಮತ್ತು ಸಮಸ್ಯೆಗಳನ್ನು ಪರಿಹರಿಸಲು, ಮುಖ್ಯಮಂತ್ರಿ ಸಿದ್ದರಾಮಯ್ಯ, ಇಂದು ಬೆಳಗ್ಗೆ 11.30ಕ್ಕೆ, ರಾಜ್ಯದ ಎಲ್ಲ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಸಿ.ಇ.ಓ.ಗಳೊಂದಿಗೆ, ವಿಡಿಯೋ ಸಂವಾದದ ಮೂಲಕ, ಸಭೆ ನಡೆಸಲಿದ್ದಾರೆ. ಕಾನೂನು ಖಾತೆ ಸಚಿವ ಎಚ್.ಕೆ.ಪಾಟೀಲ, ಬೆಂಗಳೂರಿನಲ್ಲಿ ಈ ವಿಷಯ ತಿಳಿಸಿದರು.

<><><>

**ಭಾರತ ಸರ್ಕಾರದ ವಾರ್ತಾ ಶಾಖೆ – ಪಿ.ಐ.ಬಿ.,** ಬೆಂಗಳೂರು, ವಿಜಯಪುರ ಜಿಲ್ಲಾಡಳಿತ ಹಾಗೂ ವಿವಿಧ ಸಂಘಗಳ ಆಶ್ರಯದಲ್ಲಿ, ಇಂದು ಬೆಳಗ್ಗೆ 10.30ಕ್ಕೆ, ವಿಜಯಪುರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ, ಕೇಂದ್ರ ಪುರಸ್ಕೃತ ಯೋಜನೆಗಳ ಕುರಿತು, ಮಾಧ್ಯಮ ಪ್ರತಿನಿಧಿಗಳಿಗೆ, ವಾರ್ತಾಲಾಪ ಕಾರ್ಯಾಗಾರ ಆಯೋಜಿಸಿದೆ. ರಾಜ್ಯಸಭೆ ಸಂಸದೆ ಶ್ರೀಮತಿ ಸುಧಾ ಮೂರ್ತಿ ಹಾಗೂ ಕ್ಷೇತ್ರದ ಸಂಸದ ರಮೇಶ ಜಿಗಜಿಣಗಿ, ವಾರ್ತಾಲಾಪ ಕಾರ್ಯಾಗಾರವನ್ನು ಉದ್ಘಾಟಿಸಲಿದ್ದಾರೆ.

<><><>

'ಸ್ವಚ್ಛತಾ ಹೀ ಸೇವಾ', 'ಜಿ.ಎಸ್.ಟಿ. 2.ಓ', 'ಸ್ವಸ್ಥ ನಾರಿ ಸಶಕ್ತ ಪರಿವಾರ' ಅಭಿಯಾನ, 'ಕೃಷಿ ತೋಟಗಾರಿಕಾ ವಲಯದ ಯೋಜನೆಗಳ ಅನುಷ್ಠಾನ', 'ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ', 'ಭಾರತೀಯ ನ್ಯಾಯ ಸಂಹಿತೆ', 'ಭಾರತೀಯ ಸಾಕ್ಷ್ಯ ಅಧಿನಿಯಮ – 2023', 'ಹಣಕಾಸು ಸೇರ್ಪಡೆ ಪರಿಪೂರ್ಣತೆ ಅಭಿಯಾನ', 'ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಯೋಜನೆಗಳ ಅನುಷ್ಠಾನ ಹಾಗೂ ಪೋಷಣ್ ಅಭಿಯಾನ'ದ ಕುರಿತು, ಮಾಹಿತಿ ಹಂಚಿಕೊಳ್ಳಲಾಗುತ್ತಿದೆ.

<><><>

**'ಆರೋಗ್ಯದ ಬಗ್ಗೆ ಯೋಚನೆ; ಔಷಧ ತಜ್ಞರ ಯೋಚನೆ!'** ಧ್ಯೇಯದೊಂದಿಗೆ, ವಿಶ್ವ ಫಾರ್ಮಾಸಿಸ್ಟ್ ದಿನ ಆಚರಿಸಲಾಯಿತು. ಸಮಾಜದ ಆರೋಗ್ಯ ಕಾಪಾಡಲು, ಸಮರ್ಪಣಾ ಮನೋಭಾವದಿಂದ, ಕರ್ತವ್ಯ ನಿರ್ವಹಿಸುತ್ತಿರುವ, ಎಲ್ಲ ಔ ಧ ತಜ್ಞರ ಪರಿಶ್ರಮಕ್ಕೆ, ಕೃತಜ್ಞತೆ ಸಲ್ಲಿಸುವ ದಿನವಾಗಿ, ವಿಶೇಷ ಕಾರ್ಯಕ್ರಮಗಳು ಜರುಗಿದವು.

<><><>

**ಚಿತ್ರದುರ್ಗದ ಎಸ್.ಜೆ.ಎಂ. ಫಾರ್ಮಸಿ** ಕಾಲೇಜಿನಲ್ಲಿ, ಜಿಲ್ಲಾ ಔಷಧ ಮಾರಾಟಗಾರರ ಸಂಘ, ಕರ್ನಾಟಕ ಔಷಧ ನಿಯಂತ್ರಣ ಇಲಾಖೆ, ಆಹಾರ ಸಂರಕ್ಷಣೆ ಹಾಗೂ ಔಷಧ ಆಡಳಿತ ಇಲಾಖೆ ಸಹಯೋಗದಲ್ಲಿ, ವಿಶ್ವ ಔಷಧ ತಜ್ಞರ ದಿನ ಆಚರಿಸಲಾಯಿತು.

<><><>

**ಪ್ರದೇಶ ಸಮಾಚಾರಕ್ಕಾಗಿ,** ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ, ಧಾರವಾಡ ಜಿಲ್ಲೆ, ಕೆಮಿಸ್ಟ್ ಮತ್ತು ಡ್ರಗ್ಗಿಸ್ಟ್ ಅಸೋಸಿಯೇಷನ್, ನಿಕಟಪೂರ್ವ ಕಾರ್ಯದರ್ಶಿ, ಎಂ.ಬಿ. ಮಠಪತಿ.

<><><>

**ಸೇವೆ ಮತ್ತು ಸುಶಾಸನ ಧ್ಯೇಯದೊಂದಿಗೆ,** ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ, ಸೇವಾ ಪರ್ವದ ಮೂಲಕ, ಪರಿವರ್ತನೆ ಹಾಗೂ ಪ್ರಗತಿಯನ್ನು, ಸಾರ್ವಜನಿಕ ಸೇವೆ ಮತ್ತು ಉತ್ತಮ ಆಡಳಿತದಿಂದ ಸಾಧಿಸಲು, ಶ್ರಮಿಸುತ್ತಿದೆ.

<><><>

**ಸಾರ್ವಜನಿಕ ಸೇವೆಗಳಿಂದ ಆರ್ಥಿಕ ಸಬಲೀಕರಣದ** ವರೆಗೆ, ಭಾರತದ ಇ–ಆಡಳಿತ ಪರಿಸರ ವ್ಯವಸ್ಥೆ, ನಾಗರಿಕರ ಅನುಭವವನ್ನು ಮರು ವ್ಯಾಖ್ಯಾನಿಸುತ್ತಿದೆ. ಸರ್ಕಾರಿ ಪ್ರಯೋಜನಗಳು, ಸಬ್ಸಿಡಿಗಳು ಮತ್ತು ನೇರ ಲಾಭ ವರ್ಗಾವಣೆ, ಅಥವಾ DBT ಪಾವತಿಗಳನ್ನು, ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ಕಳುಹಿಸಲು, ಜನ ಧನ, ಆಧಾರ ಮತ್ತು ಮೊಬೈಲ್, JAM ನೆಟ್‌ವರ್ಕ್ ಅನ್ನು ಬಳಸುತ್ತದೆ. ಕಾಗದ ರಹಿತ, ವಂಚನೆ–ಮುಕ್ತ, ತಡೆರಹಿತ, ಪಾರದರ್ಶಕ ಮತ್ತು ಸುರಕ್ಷಿತ ಆಡಳಿತವನ್ನು ಖಚಿತಪಡಿಸುತ್ತದೆ.

<><><>

**ಪ್ರಧಾನಮಂತ್ರಿಯವರು ಹೇಳಿದಂತೆ,** ಇ–ಆಡಳಿತವು ಸುಲಭ, ಪರಿಣಾಮಕಾರಿ, ಆರ್ಥಿಕ ಮತ್ತು ಪರಿಸರ ಸ್ನೇಹಿ ಆಡಳಿತವಾಗಿದೆ.

<><><>

**ಹಿರಿಯ ಸಾಹಿತಿ, ಎಸ್.ಎಲ್. ಭೈರಪ್ಪ ಅವರ** ಪಾರ್ಥಿವ ಶರೀರಕ್ಕೆ, ಕುವೆಂಪು ನಗರದ ಅವರ ನಿವಾಸದಲ್ಲಿ, ಇಂದು ಬೆಳಗ್ಗೆ 8 ಗಂಟೆಗೆ, ಕುಟುಂಬ ವರ್ಗ ಧಾರ್ಮಿಕ ಕಾರ್ಯಗಳನ್ನು ನೆರವೇರಿಸಲಿದೆ. ಬೆಳಗ್ಗೆ 11 ಗಂಟೆಗೆ, ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ, ಸರ್ಕಾರಿ ಗೌರವದೊಂದಿಗೆ, ಭೈರಪ್ಪ ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆ ನಡೆಯಲಿದೆ ಎಂದು, ಹಿರಿಯ ಸಾಮಾಜಿಕ ಕಾರ್ಯಕರ್ತ, ಸಾಮರಸ್ಯ ವೇದಿಕೆಯ ವಾದಿರಾಜ, ಆಕಾಶವಾಣಿಗೆ ಮಾಹಿತಿ ನೀಡಿದ್ದಾರೆ.

<><><>

**ಕೇಂದ್ರ ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ ಸಹಯೋಗದಲ್ಲಿ,** ಇಂದಿನಿಂದ ಮೂರು ದಿನಗಳ ಕಾಲ, 13ನೇ ರಾಷ್ಟ್ರೀಯ, 'ಪೆನ್ಕಾಕ್ ಸಿಲಟ್', ಸಮರ ಕಲೆ ಸ್ಪರ್ಧೆಗಳು, ನಾಲ್ಕು ವಿಭಾಗಗಳಲ್ಲಿ ನಡೆಯಲಿವೆ ಎಂದು, ಕೊಪ್ಪಳ ಸಂಸದ ಹಾಗೂ ರಾಜ್ಯ ಪೆನ್ಕಾಕ್ ಸಿಲಟ್ ಕಾರ್ಯಾಧ್ಯಕ್ಷ ಕೆ.ರಾಜಶೇಖರ ಹಿಟ್ನಾಳ, ತಿಳಿಸಿದ್ದಾರೆ. ಪ್ರಥಮ ಬಾರಿಗೆ, ಕೊಪ್ಪಳದಲ್ಲಿ ಆಯೋಜಿತ, ಒಲಿಂಪಿಕ್ಸ್ ಅಸೋಸಿಯೇಷನ್ ಮಾನ್ಯತೆ ಹೊಂದಿರುವ, ಇಂಡೋನೇಷಿಯಾ ಹಾಗೂ ಮಲಯದ, ಸಮರ ಕಲೆ ಪೆನ್ಕಾಕ್ ಸಿಲಟ್ ಪಂದ್ಯಾವಳಿಯಲ್ಲಿ, 27 ರಾಜ್ಯಗಳ, ಹನ್ನೆರಡು ನೂರಕ್ಕೂ ಹೆಚ್ಚು ಸ್ಪರ್ಧಾಳುಗಳು ಭಾಗವಹಿಸುತ್ತಿದ್ದಾರೆ. ಗವಿಮಠದ ಶ್ರೀ ಗವಿಸಿದ್ಧೇಶ್ವರ ಸ್ವಾಮೀಜಿ, ಊಟ ಹಾಗೂ ವಸತಿಗೆ, ವ್ಯವಸ್ಥೆ ಮಾಡಿದ್ದಾರೆ ಎಂದು, ಸಂಸದ ಹಿಟ್ನಾಳ ಸ್ಮರಿಸಿದರು.

<><><>

**ಕಲಬುರಗಿ ಜಿಲ್ಲೆ, ಸೇಡಂ ತಾಲೂಕು,** ಕೋಲಕುಂದಾ ಗ್ರಾಮದ ಯುವ ಕ್ರಿಕೆಟ್ ಪಟು, ಮಮತಾ ಮಡಿವಾಳ, ಭಾರತದ ಮಹಿಳಾ ಕ್ರಿಕೆಟ್ 'ಎ' ತಂಡಕ್ಕೆ ಆಯ್ಕೆಯಾಗಿದ್ದಾರೆ. ಸಚಿವ ಶರಣ ಪ್ರಕಾಶ ಪಾಟೀಲ, ಎಕ್ಸ್ ಮಾಧ್ಯಮದಲ್ಲಿ, ಗಡಿ ಗ್ರಾಮದ ಪ್ರತಿಭೆಯನ್ನು ಅಭಿನಂದಿಸಿ, ಐ.ಸಿ.ಸಿ. ಮಹಿಳಾ ವಿಶ್ವಕಪ್ ಅಭ್ಯಾಸ ಪಂದ್ಯದಲ್ಲಿ ಮಮತಾ ಆಡಲಿದ್ದಾರೆ. ರಾಷ್ಟ್ರೀಯ ಮಹಿಳಾ ಕ್ರಿಕೆಟ್ ತಂಡದಲ್ಲಿ, ಭಾರತವನ್ನು ಪ್ರತಿನಿಧಿಸುವ ಅವಕಾಶಗಳನ್ನು ಒದಗಿಸಿದೆ ಎಂದಿದ್ದಾರೆ. ಸೇಡಂ ತಾಲೂಕು, ಜೇವರ್ಗಿಯ ಶ್ರೇಯಾಂಕ ಪಾಟೀಲ, ಈಗಾಗಲೇ, ಭಾರತ ಕ್ರಿಕೆಟ್ ತಂಡದಲ್ಲಿ ಮಿಂಚುತ್ತಿದ್ದಾರೆ ಎಂದು, ಅವರು ಹರ್ಷ ವ್ಯಕ್ತ ಪಡಿಸಿದ್ದಾರೆ.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು,** ನಾಡಿದ್ದು, ಕೊನೆ ಭಾನುವಾರದಂದು, 11 ಗಂಟೆಗೆ, 'ಮನ್ ಕೀ ಬಾತ್' ನಲ್ಲಿ, ಆಕಾಶವಾಣಿ ಮೂಲಕ, ದೇಶ, ವಿದೇಶಗಳ ಭಾರತೀಯರೊಂದಿಗೆ ತಮ್ಮ ಅನಿಸಿಕೆ ಹಂಚಿಕೊಳ್ಳಲಿದ್ದಾರೆ. ಇದು ಮನದ ಮಾತಿನ 126ನೇ ಆವೃತ್ತಿಯಾಗಿದೆ. ನಮೋ ಆಪ್, My Gov.in ಜಾಲತಾಣ, ಅಥವಾ 1800–11–7800 ಗೆ ಕರೆ ಮಾಡಿ, ಸಾರ್ವಜನಿಕರು ತಮ್ಮ ಸಲಹೆ ದಾಖಲಿಸಬಹುದು.

<><><>

**ಉತ್ತರ ಒಳನಾಡು ಜಿಲ್ಲೆಗಳಲ್ಲಿ, ಇಂದು** ಮತ್ತು ನಾಳೆ, ವ್ಯಾಪಕವಾಗಿ ಸಾಧಾರಣದಿಂದ, ಭಾರಿ ಮಳೆ; ಇನ್ನುಳಿದ ದಿನಗಳಲ್ಲಿ, ಚದುರಿದಂತೆ ವ್ಯಾಪಕವಾಗಿ, ಸಾಧಾರಣ ಮಳೆಯಾಗಲಿದೆ ಎಂದು, ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ, ತಿಳಿಸಿದೆ.

ಕರಾವಳಿ ಹಾಗೂ ಮಲೆನಾಡು ಜಿಲ್ಲೆಗಳಲ್ಲಿ, ಇಂದು ಮತ್ತು ನಾಳೆ, ವ್ಯಾಪಕವಾಗಿ ಸಾಧಾರಣ ಮಳೆ ಹಾಗೂ ಅಲ್ಲಲ್ಲಿ ಭಾರಿ ಮಳೆ ನಿರೀಕ್ಷಿಸಲಾಗಿದೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಸ್ವಚ್ಛತೆಯೇ ಸೇವೆ ಪಾಕ್ಷಿಕ:** 'ಒಂದು ದಿನ, ಒಂದು ಗಂಟೆ, ಒಂದಾಗಿ' ಅಭಿಯಾನಕ್ಕೆ, ವ್ಯಾಪಕ ಜನ ಸ್ಪಂದನೆ.
- **ಭಾರತೀಯ ವಾರ್ತಾ ಶಾಖೆಯಿಂದ,** ವಿಜಯಪುರದಲ್ಲಿ ಇಂದು, ಕೇಂದ್ರ ಪುರಸ್ಕೃತ ಯೋಜನೆಗಳ, ವಾರ್ತಾಲಾಪ ಕಾರ್ಯಾಗಾರ.
- **ಕೊಪ್ಪಳದಲ್ಲಿ, ಇಂದಿನಿಂದ ಮೂರು ದಿನ,** 'ಪೆನ್ಕಾಕ್ ಸಿಲಟ್', 13ನೇ ರಾಷ್ಟ್ರೀಯ, ಸಮರ ಕಲೆ ಸ್ಪರ್ಧೆ.
- **ಕಲಬುರಗಿ ಜಿಲ್ಲೆ, ಕೋಲಕುಂದಾ ಗ್ರಾಮದ,** ಮಮತಾ ಮಡಿವಾಳ, ಭಾರತ ಮಹಿಳಾ ಕ್ರಿಕೆಟ್ 'ಎ' ತಂಡಕ್ಕೆ ಆಯ್ಕೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>